



ಸೂರ್ಯೋದಯ ಸಂದರ್ಭದಲ್ಲಿ ಕುಕ್ಕರಹಳ್ಳಿ ಕೆರೆ ಏರಿ ಮೇಲೆ ಲಘು ವ್ಯಾಯಾಮ

ಮೈಸೂರು ಝುಗಮಗಿಸಲಿದೆ. ಕೋವಿಡ್ ಕಾರಣ ಈ ಬಾರಿ ಅರಮನೆಗೆ ಸೀಮಿತವಾಗಿ ಸರಳವಾಗಿ, ಸಂಪ್ರದಾಯದಂತೆ ಈ ಬಾರಿ ನಡೆಯುತ್ತಿದೆ.

ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿ ಆರಾಧನೆಯೊಂದಿಗೆ ಆರಂಭವಾಗಿ, ವಿಜಯದಶಮಿಯಂದು ಅರಮನೆ ಅಂಗಳದಿಂದ ಬನ್ನಿಮಂಟಪದವರೆಗೆ ಸಾಗುವ ಜಂಬೂಸವಾರಿಯೊಂದಿಗೆ ಅಂತ್ಯಗೊಳ್ಳುವ ನಾಡಹಬ್ಬಕ್ಕೆ ಸುದೀರ್ಘ ಇತಿಹಾಸ, ಪರಂಪರೆ, ಸಂಸ್ಕೃತಿ ಇದೆ.

ವಿಜಯನಗರ ಸಾಮ್ರಾಜ್ಯದ ಅರಸರು ಶಕ್ತಿ, ಸಂಪತ್ತು, ವೈಭವ, ಶೂರತ್ವ, ಕಲೆ, ಸಾಹಿತ್ಯ, ಸಂಗೀತ, ನೃತ್ಯ, ಸಂಸ್ಕೃತಿ, ಶ್ರೀಮಂತಿಕೆಯನ್ನು ಪ್ರಚುರಪಡಿಸುವುದಕ್ಕಾಗಿ ನವರಾತ್ರಿ ಉತ್ಸವವನ್ನು ದೊಡ್ಡ ವೇದಿಕೆಯಾಗಿ ಮಾಡಿಕೊಂಡರು. ವಿಜಯದ ದ್ಯೋತಕವಾಗಿ ವಿಜಯದಶಮಿ ಪರಂಪರೆ ಹುಟ್ಟುಹಾಕಿದರು.

ಈ ಸಾಮ್ರಾಜ್ಯ ಪತನ ಬಳಿಕ ಹಲವು ಕಾಲಘಟ್ಟಗಳಲ್ಲಿ, ಅಂದಿನ ವಿದ್ಯಮಾನಗಳಿಗನುಗುಣವಾಗಿ ಸ್ವರೂಪ ಬದಲಾಗುತ್ತಾ ಬಂದು, ಅರಸರಿಂದ ವರ್ಗಾವಣೆಗೊಂಡು ಈಗ ಜನರ ದಸರೆಯಾಗಿದೆ. ಸಂಸ್ಕೃತಿ, ಪರಂಪರೆ ಮುಂದುವರಿಕೆಗಿಂತ ಹೆಚ್ಚಾಗಿ ದಸರೆಯು ಈಗ ಪ್ರವಾಸೋದ್ಯಮದ ಭಾಗವಾಗಿದೆ.

ಪ್ರಮುಖವಾಗಿ ಹಿಂದೆ ಮಹಾರಾಜರು ಕುಳಿತು ಜಂಬೂಸವಾರಿ ಹೋಗುತ್ತಿದ್ದ 750 ಕೆ.ಜಿ ತೂಕದ ಚಿನ್ನದ ಅಂಬಾರಿಯಲ್ಲಿ ಈಗ ತಾಯಿ ಚಾಮುಂಡೇಶ್ವರಿ ಮೆರವಣಿಗೆ ನಡೆಯುತ್ತಿದೆ. ರಾಜವಂಶಸ್ಥರು ಅರಮನೆಯೊಳಗೆ ಸಿಂಹಾಸನದ ಮೇಲೆ ಕುಳಿತು ಖಾಸಗಿ ದರ್ಬಾರ್ ನಡೆಸುತ್ತಾರೆ.

1799ರಲ್ಲಿ ಟಿಪ್ಪುವಿನ ಮರಣದ ಬಳಿಕ ಯದುವಂಶದ ಕೇಂದ್ರ ಸ್ಥಾನ (ರಾಜಧಾನಿ) ಮೈಸೂರಿಗೆ ಸ್ಥಳಾಂತರವಾಗಿ, 'ಮೈಸೂರು ದಸರೆ' ಎಂಬ ಹೆಸರು ಪಡೆದು 1969ರವರೆಗೆ ಬಹುತೇಕ ಒಂದೇ ಸ್ವರೂಪದಲ್ಲಿ ನಡೆದುಕೊಂಡು ಬಂದಿತ್ತು.

1969ರ ಡಿಸೆಂಬರ್‌ನಲ್ಲಿ ಆಗಿನ ಪ್ರಧಾನಿ ಇಂದಿರಾ ಗಾಂಧಿ, ರಾಜರಿಗೆ ನೀಡುತ್ತಿದ್ದ ರಾಜಧನ ಸ್ಥಗಿತಗೊಳಿಸಿದ್ದರಿಂದ 1970ರಲ್ಲಿ ಮೆರವಣಿಗೆಯಲ್ಲಿ ಜಯಚಾಮರಾಜ ಒಡೆಯರ್ ಪಾಲ್ಗೊಳ್ಳಲಿಲ್ಲ. ಹೀಗಾಗಿ, ಕೆಲವೇ ನಾಗರಿಕರು ಸೇರಿಕೊಂಡು ದಸರೆಯನ್ನು ಖಾಸಗಿಯಾಗಿ ಹಾಗೂ ಸರಳವಾಗಿ ಆಚರಿಸಿದರು.

ಪ್ರವಾಸೋದ್ಯಮ ದೃಷ್ಟಿಯಿಂದ ನಾಡಹಬ್ಬವಾಗಿ ಪರಿವರ್ತನೆಗೊಂಡು ಸರ್ಕಾರದ ವತಿಯಿಂದ ಆಚರಣೆ ಆರಂಭವಾಯಿತು.



ಮೈಸೂರಿನ ಮಸಾಲೆ ದೋಸೆಯ ರುಚಿಯಷ್ಟೇ ಅಲ್ಲ, ಜನರ ಅಭಿರುಚಿಯೂ ಬದಲಾಗಿದೆ.

## ಸಂಗೀತ ಕೇಳುವರಿಲ್ಲ ನೃತ್ಯ ನೋಡುವರಿಲ್ಲ...

ಮೈಸೂರಲ್ಲಿ ಸಂಗೀತ, ನೃತ್ಯ ಕಾರ್ಯಕ್ರಮವೆಂದರೆ ಜನಜಂಗುಳಿ. ಅದೊಂದು ಹಬ್ಬ, ಸಭಾಂಗಣ ತುಂಬಿ ತುಳುಕುತಿತ್ತು. ಒಬ್ಬರ ಕಿವಿಯಿಂದ ಮತ್ತೊಬ್ಬರ ಕಿವಿಗೆ ತಲುಪಿ ದೊಡ್ಡ ಸುದ್ದಿಯಾಗುತಿತ್ತು. ಆ ಸೊಬಗು ಕಣ್ತುಂಬಿಕೊಳ್ಳುವುದೇ ಪರಮಾನಂದ. ಅದೇ ಕಲಾವಿದರಿಗೆ ಸಿಗುತ್ತಿದ್ದ ದೊಡ್ಡ ಗೌರವ. ಈಗ ಸಂಗೀತ ಕಾರ್ಯಕ್ರಮ ನಡೆಯುತ್ತಿರುವ ವಿಚಾರವೇ ಗೊತ್ತಾಗಲ್ಲ. ಯುವ ಸಮೂಹದ ಆಸಕ್ತಿಗಳೇ ಬೇರೆಯಾಗಿದೆ. ಗೊಂಬೆ ಕೂರಿಸುವ ಸಂಪ್ರದಾಯವೂ ಮರೆಯಾಗುತ್ತಿದೆ. 30 ವರ್ಷಗಳಿಂದ ಮೈಸೂರಲ್ಲಿ ನೆಲೆಸಿರುವ ನನಗೆ ಈ ಬೆಳವಣಿಗೆ ಆತಂಕ ಮೂಡಿಸುತ್ತದೆ. ಇಲ್ಲಿನ ವಾತಾವರಣವೂ ಬದಲಾಗುತ್ತಿದ್ದು, ನಗರದೊಳಗಿನ ಹಸಿರು ಕಡಿಮೆಯಾಗುತ್ತಿದೆ.

**-ಕೃಪಾ ಫಡ್ಕೆ, ನೃತ್ಯ ಕಲಾವಿದೆ**

